

# ಕಣ್ಣುಗಳ ಕಂಜಂಕ್ಟಿವೈಟಿಸ್

**ಕಣ್ಣುಗಳ 'ಕಂಜಂಕ್ಟಿವೈಟಿಸ್' ಒಂದು ರೀತಿಯ ವೈರಸ್ ಸೋಂಕು. ವೈರಾಣು, ಬ್ಯಾಕ್ಟೀರಿಯಾ, ಅಲರ್ಜಿ ಮುಂತಾದ ಕಾರಣಗಳಿಂದ ಕಣ್ಣುಗಳಿಗೆ ಹಾನಿಯಾಗುವ ಸಾಧ್ಯತೆ ಇದೆ. ತಜ್ಞ ನೇತ್ರವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳುವುದು ಒಳಿತು.**

**■ ಉಮಾ ಅನಂತ್**

ಸದ್ಯ ಎಲ್ಲೆಡೆ ಕೊರೊನಾ ಸೋಂಕಿನದ್ದೇ ಸದ್ದು, ಸುದ್ದಿ, ಭೀತಿ.. ಎಲ್ಲವೂ. ಯಾವುದೇ ಇತರ ವೈರಸ್ ಸೋಂಕು ತಗುಲಿದರೂ ಕೊರೊನಾ ಇರಬಹುದೇ ಎಂಬ ಆತಂಕ. ಕಣ್ಣುಗಳೂ ಇದರಿಂದ ಹೊರತಲ್ಲ. ಕಣ್ಣುಗಳ 'ಕಂಜಂಕ್ಟಿವೈಟಿಸ್ ಸೋಂಕು' ಒಬ್ಬ ರೋಗಿಯಿಂದ ಮತ್ತೊಬ್ಬನಿಗೆ ಹರಡುವಂಥದ್ದು. ಆದರೆ ಇದು ಕೊರೊನಾವಲ್ಲ. ಕಣ್ಣುಗಳಿಂದ, ಕಣ್ಣೀರಿನಿಂದ ಕೊರೊನಾ ವೈರಸ್ ಹರಡುವ ಸಾಧ್ಯತೆ ಇದೆ. ಕೆನಡಾ, ಚೀನಾಗಳಲ್ಲಿ ಈ ಕುರಿತು ನಡೆಸಿದ ಅಧ್ಯಯನವೂ ಇದನ್ನು ಸಾಬೀತುಪಡಿಸಿದೆ. ಆದರೆ ಭಯ ಬೇಡ, ಭಾರತದಲ್ಲಿ ಇಂಥ ಯಾವುದೇ ಪ್ರಕರಣಗಳು ಇದುವರೆಗೂ ದಾಖಲಾಗಿಲ್ಲ.

ಕೊರೊನಾ ವೈರಸ್ ತಗುಲಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಹಲವು ಪರೀಕ್ಷೆಗಳಿವೆ. ಕಣ್ಣು ಕೆಂಪಾಗುವುದರಿಂದಲೂ ಕೊರೊನಾ ಇರಬಹುದು ಎಂಬ ಶಂಕೆ ವೈದ್ಯವಲಯದಲ್ಲಿ ವ್ಯಕ್ತವಾಗುತ್ತಿದೆ. ಈ ಬಗ್ಗೆ ವೈದ್ಯಕೀಯ ತಜ್ಞರು ಅಧ್ಯಯನವನ್ನೂ ನಡೆಸಿದ್ದಾರೆ.

ಕೆನಡಾದ ರಾಯಲ್ ಅಲೆಕ್ಸಾಂಡರ್ ಆಸ್ಪತ್ರೆಯ ನೇತ್ರವಿಭಾಗಕ್ಕೆ ಏಷ್ಯಾ ಭಾಗದಿಂದ ಬಂದಿದ್ದ ಮಹಿಳೆಯ ಕಣ್ಣು ಕೆಂಪಗಾಗಿತ್ತು. ಆಕೆಗೆ ಕೊರೊನಾ ಪರೀಕ್ಷೆ ಮಾಡಿದಾಗ ಪಾಸಿಟಿವ್ ಬಂದದ್ದು ಈ ಶಂಕೆ ಬಲವಾಗಲು ಕಾರಣ.

ಕಣ್ಣು ಕೆಂಪಗಾಗುವುದು ಕೊರೊನಾದ ಲಕ್ಷಣ ಎಂಬುದನ್ನು ಕೆನಡಾ ಆಸ್ಪತ್ರೆಯ ಶೇ 15 ಪ್ರಕರಣಗಳಲ್ಲಿ ವೈದ್ಯರು ಸಾಬೀತುಪಡಿಸಿದ್ದಾರೆ. ಕೆಮ್ಮು, ಜ್ವರ ಇಲ್ಲದೇ ಇದ್ದರೂ ಇಷ್ಟೂ ಮಂದಿಯಲ್ಲಿ ಕೊರೊನಾ ಸೋಂಕು ತಗುಲಿದ ಬಗ್ಗೆ ವರದಿಯಾಗಿತ್ತು.

### ಮುನ್ನೆಚ್ಚರಿಕೆಗಳೇನು?

ಕಣ್ಣಿಗೆ ತಗಲುವ ಯಾವುದೇ ವೈರಸ್ ಸೋಂಕು ತಗುಲದಂತೆ ತಡೆಯಬೇಕಾದರೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

- ಕಣ್ಣುಗಳನ್ನು ಶುದ್ಧ ನೀರಿನಲ್ಲಿ ಆಗಾಗ ತೊಳೆಯುತ್ತಿರಿ
- ಕೊಳಕು ಕೈಗಳಲ್ಲಿ ಕಣ್ಣುಗಳನ್ನು ಮುಟ್ಟಬೇಡಿ
- ಊತ, ಕಡಿತ ಕಂಡುಬಂದರೆ ಕಣ್ಣುಗಳನ್ನು ಉಜ್ಜಬೇಡಿ
- ಕಣ್ಣುಗಳು ಕೆಂಪಾದರೆ, ನೋವು ಕಂಡುಬಂದರೆ ತಕ್ಷಣ ತಜ್ಞ ನೇತ್ರವೈದ್ಯರನ್ನು ಕಾಣಿ
- ಹೊರಗೆ ಹೋಗುವಾಗ ಗಾಗಲ್ಸ್ ಧರಿಸುವುದು ಸೂಕ್ತ
- ಕಣ್ಣುಗಳಲ್ಲಿ ನೀರು ಸುರಿಯುತ್ತಿದ್ದರೆ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಿ.

'ಕೊರೊನಾ ವೈರಸ್ ಸಾಮಾನ್ಯವಾಗಿ ಮೂಗು, ಬಾಯಿಯ ಮೂಲಕ ವ್ಯಕ್ತಿಯ ದೇಹ ಪ್ರವೇಶಿಸುತ್ತದೆ. ಕಣ್ಣುಗಳ ಮೂಲಕವೂ ಹರಡುತ್ತದೆ ಎನ್ನುತ್ತದೆ ಅಧ್ಯಯನ. ಈ ವೈರಾಣು ಕಣ್ಣಿನ ತೆಳುಪರದೆ ಕಂಜಕ್ಟಿವಾಗೆ ಹಾನಿ ಮಾಡುತ್ತದೆ. ಇದಕ್ಕೆ 'ಕಂಜಂಕ್ಟಿವೈಟಿಸ್ ಸೋಂಕು' ಎಂದು ಕರೆಯಲಾಗುತ್ತದೆ. ಸೋಂಕು ತಗುಲಿದ ವ್ಯಕ್ತಿಯ ಕಣ್ಣು ಕೆಂಪಾಗುತ್ತದೆ, ಕಣ್ಣಿನಲ್ಲಿ ಧಾರಾಕಾರ ನೀರು ಸುರಿಯುತ್ತದೆ, ಊತ ಕಾಣಿಸಿಕೊಳ್ಳುತ್ತದೆ. ಕೆಲವರಿಗೆ ಕಣ್ಣುಗಳಲ್ಲಿ ಕಡಿತವೂ ಉಂಟಾಗಬಹುದು. ರೋಗಿಗಳ ಕಣ್ಣೀರಿನ ಅಂಶ ಬೇರೆಯವರಿಗೆ ತಗುಲಿದರೆ ವೈರಸ್ ಹರಡುವ ಸಾಧ್ಯತೆ ಇದೆ' ಎಂದು ಹೇಳುತ್ತಾರೆ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ರವಿ ದೊರೈರಾಜ್.

'ಕಣ್ಣಿನ ಮೂಲಕ ವೈರಸ್ ಹರಡುತ್ತದೆ ಎಂಬುದಕ್ಕೆ ಚೀನಾದಲ್ಲಿ 30 ಕೊರೊನಾ ರೋಗಿಗಳ ಮೇಲೆ ನಡೆಸಿದ ಅಧ್ಯಯನ ಸಾಬೀತುಪಡಿಸಿದೆ. 30 ರೋಗಿಗಳ ಮೇಲೆ ಅಧ್ಯಯನ ನಡೆಸಿದ್ದು, ಒಬ್ಬ ರೋಗಿಯಲ್ಲಿ ವೈರಸ್ ಕಂಡುಬಂದಿದೆ. ಆದರೆ ಭಾರತದಲ್ಲಿ ಇಂತಹ ಯಾವುದೇ ಪ್ರಕರಣ ಪತ್ತೆಯಾಗಿಲ್ಲ' ಎನ್ನುತ್ತಾರೆ ಡಾ. ರವಿ. ■